**ಪ್ರಸ್ತುತ ಸಾಕ್ಷಿ ಪ್ರಾಸಾಃ2 ಈ ದಿನ ಹಾಜರಿದ್ದು, ಅವರಿಗೆ ಪ್ರಮಾಣ ವಚನ ಬೋಧಿಸಿ ಮುಂದುವರೆದ ಮುಖ್ಯ ವಿಚಾರಣೆಗೆ ಒಳಪಡಿಸಲಾಗಿದೆ.**

**ಮುಂದುವರೆದ ಮುಖ್ಯ ವಿಚಾರಣೆ ರಾಜ್ಯದ ಪರ ಪಿ.ಪಿ. ರವರಿಂದಃ**

1. ನಾನು ಈ ಹಿಂದಿನ ಮುಖ್ಯ ವಿಚಾರಣೆಯಲ್ಲಿ ಉಲ್ಲೇಖಿಸಿರುವ ಮತ್ತು ನನ್ನಿಂದ ಈ ಹಿಂದೆ ನನ್ನ ತಾತ್ಕಾಲಿಕ ಅಭಿರಕ್ಷೆಗೆ ಪಡೆದಿರುತ್ತೇನೆ ಎನ್ನಲಾದ ಒಡವೆಗಳನ್ನು ಈ ದಿನ ನಾನು ಖುದ್ದಾಗಿ ಹಾಜರುಪಡಿಸಿದ್ದು ಅವುಗಳ ಪೈಕಿ  ನಾಲ್ಕು ಚಿನ್ನದ ಬಳೆಗಳನ್ನು ಒಟ್ಟಾರೆ ಮುಮಾಃ10 ಎಂದು, ಬಟಾಣಿ ಮಾದರಿಯ ಚಿನ್ನದ ಮಾಂಗಲ್ಯ ಸರವನ್ನು ಮುಮಾಃ11 ಎಂದು ಹಾಗೂ ಗಜರ್ ಬಾಲ್ ಮಾದರಿಯ ಮತ್ತೊಂದು ಚಿನ್ನದ ಸರವನ್ನು ಸಹ ಹಾಜರುಪಡಿಸಿದ್ದು ಅದನ್ನು ಈಗ ಮುಮಾಃ12 ಎಂದು ಗುರುತಿಸಲಾಗಿರುತ್ತದೆ.

2. ಮುಮಾಃ 10 ರಿಂದ 12 ರ ಒಡವೆಗಳು ನನ್ನ ಮೃತ ಮಗಳಿಗೆ ಸೇರಿದ ಒಡವೆಗಳು. ನನ್ನ ಮೃತ ಮಗಳು 15 ದಿನಗಳಿಗೊಮ್ಮೆ ತಾನು ಕೆಲಸ ನಿರ್ವಹಿಸುತಿದ್ದ ಚಿಕ್ಕಮಗಳೂರು ಸ್ಥಳದಿಂದ ಸಕಲೇಶಪುರದಲ್ಲಿರುವ ಹುದೇವಾರ್ ಗ್ರಾಮಕ್ಕೆ ಬರುತ್ತಿದ್ದರು. ಹಾಗೆ ಬಂದಾಗಲೆಲ್ಲ ಮಾಂಗಲ್ಯ ಸರ ಮತ್ತು ಬಳೆಗಳನ್ನು ಧರಿಸುತ್ತಿದ್ದಳು. ಮುಮಾಃ ಒಡವೆಗಳ ಪೈಕಿ ಮುಮಾಃ12 ಸರವನ್ನು ಸಾಮಾನ್ಯವಾಗಿ ನನ್ನ ಮೃತ ಮಗಳುಧರಿಸುತ್ತಿದ್ದಳು ಮಿಕ್ಕ ಒಡವೆಗಳನ್ನು ಹಬ್ಬ, ಜಾತ್ರೆ

ಮುಂತಾದ ವಿಶೇಶ ದಿನಗಳಲ್ಲಿ ಧರಿಸುತ್ತಿದ್ದಳು. ನಾನು ಸದರಿ ಒಡವೆಗಳನ್ನು ನನ್ನ ಮಗಳ ಜೀವಿತ ಅವಧಿಯಲ್ಲಿ ಅನೇಕ ಬಾರಿ ನೋಡಿರುತ್ತೇನೆ. ಮುಮಾಃ 10 ರಿಂದ 12 ರ ಚಿನ್ನದ ಒಡವೆಗಳನ್ನು ಹೊರತುಪಡಿಸಿ ಬೇರೆ ಇತರೆ ಒಡವೆಗಳನ್ನು ನನ್ನ ಮಗಳು ಧರಿಸುತ್ತಿರಲಿಲ್ಲ ಆದರೆ ಕೃತಕ ಚಿನ್ನದ ಒಡವೆಗಳನ್ನು ಧರಿಸುತ್ತಿದ್ದಳು. (ಪ್ರಸ್ತುತ ಸಾಕ್ಷಿ ವತಿಯಿಂದ ಈ ಹಿಂದೆ ನಾಪತ್ತೆ ದೂರಿನ ದೃಢೀಕೃತ ನಕಲನ್ನು ನಿಪಿಃ 6 ಎಂದು ಗುರುತುಪಡಿಸಲಾಗಿತ್ತು. ನಿಪಿಃ 6 ರ ಮೂಲ ದಾಖಲಾತಿಯನ್ನು ಕಳುಹಿಸಿಕೊಡುವಂತೆ ಚಿಕ್ಕಮಗಳೂರು ಪೊಲೀಸ್ ವರಿಷ್ಠಾಧಿಕಾರಿಗೆ ಪತ್ರ ವ್ಯವಹಾರ ಮಾಡಿದ್ದರೂ ಸಹ ಸದರಿ ಅಧಿಕಾರಿ ಕಚೇರಿಯಿಂದ ಪುನಃ ನಿಪಿಃ 6 ರ ಮತ್ತೊಂದು ದೃಢೀಕೃತ ನಕಲನ್ನು ಕಳುಹಿಸಿದ್ದು ಮೂಲ ನಾಪತ್ತೆ ದೂರನ್ನು ಕಳುಹಿಸಿರುವುದಿಲ್ಲ).

3. ನನಗೆ ಕುದೂರು ಪೊಲೀಸ್ ರವರ ತೋರಿಸಿದ್ದ ವ್ಯಾನಿಟಿ ಬ್ಯಾಗನ್ನು ನೋಡಿದರೆ ಗುರುತಿಸಬಲ್ಲೆನು.

<u>ಪಾಟೀ ಸವಾಲು ಆರೋಪಿ ಪರ ವಕೀಲರಾದ ಶ್ರೀಯುತ ಎಂ ಪಿ ರವರಿಂದಃ</u>

**ಈ ಹಂತದಲ್ಲಿ ಆರೋಪಿ ಪರ ವಕೀಲರು ನಿಪಿಃ 6 ರ ಮೂಲ ದಾಖಲೆ ಅತ್ಯಂತ ಮಹತ್ವದ ದಾಖಲೆಯಾಗಿದ್ದು, ಮೂಲ ದಾಖಲೆ ಇಲ್ಲೆ ಪಾಟೀ ಸವಾಲು ಕ್ಲಿಷ್ಟಕರ ಎಂದು ನುಡಿದಿರುತ್ತಾರೆ. ನಿಪಿಃ 6 ರ ಮೂಲ**

**ದಾಖಲೆ ಕುರಿತಂತೆ ಚಿಕ್ಕಮಗಳೂರು ಪೊಲೀಸ್ ವರಿಷ್ಠಾಧಿಕಾರಿ ಮೂಲ ದಾಖಲೆ ಯಾವ ಕಾರಣಕ್ಕೆ ಹಾಜರುಪಡಿಸಲಾಗಿರುವುದಿಲ್ಲ ಎಂಬ ಬಗ್ಗೆ ಸ್ಪಷ್ಟನೆಯನ್ನು ನೀಡಿರುವುದಿಲ್ಲ. ಆದುದರಿಂದ ಪ್ರಸ್ತುತ ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಗಿದೆ, ಪರಿಣಾಮ ಮುಮಾಃ 10 ರಿಂದ 12 ರ ಒಡವೆಗಳನ್ನು ಪ್ರಸ್ತುತ ಸಾಕ್ಷಿಗೆ ಈ ದಿನ ಹಿಂದಿರುಗಿಸಲಾಗಿದೆ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಸಿದ್ದಲಿಂಗ ಪ್ರಭು)
3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.